ವಾಲಿ, ಬಾಚಿ ತಬ್ಬಿಕೊಂಡರು. ಹಣೆ, ಕೆನ್ನೆ, ಗಲ್ಲ, ತುಟಿಗಳನ್ನು ಪದೇಪದೇ ಮುದ್ದಿಸತೊಡಗಿದರು. ಅಂಗಾತ ಮಲಗಿಸಿದವರು, ಬೆತ್ತಲೆ ಎದೆಯಕಣಿವೆಯಲ್ಲಿ ಸುರಕ್ಷೆ ಪಡೆಯುವಂತೆ ಮುಖ ಹುದುಗಿಸಿಕೊಂಡರು.

★★★

ಬೆಂಗಳೂರು ನಿಲ್ದಾಣಕ್ಕೆ ಬಂದು ಏಸಿ ಬರ್ತಿನಲ್ಲಿ ಕುಳಿತವರಿಗೆ ಸುತ್ತಲ ಜಗತ್ತಿನಿಂದ ಪ್ರತ್ಯೇಕಿಸಿಕೊಂಡ ಭಾವ ಆವರಿಸಿತು. ಮೊದಲ ರೈಲು ಪ್ರಯಾಣ ಈ ನಿಲ್ದಾಣದಿಂದಲೇ ಆಗಿತ್ತು. ಎಸ್ಸೆಸ್ಸೆಲ್ಸಿ ಮುಗಿಸಿದ ಹುಡುಗ ತಂದೆತಾಯಿಯರನ್ನು ಕಾಡಿ ಒಪ್ಪಿಸಿ ಪಿಯುಸಿಗೆ ಸೇರಿಕೊಂಡಿದ್ದ. ಎರಡುವರ್ಷದಿಂದ ಸರಿಯಾಗಿ ಮಳೆಯಾಗದೇ ರಾಗಿ ಕೈಗೆ ಸಿಕ್ಕಿರಲಿಲ್ಲ. ತೆಗೆಸಿದೊಂದು ಬೋರುವೆಲ್ಲು ಫೇಲಾಗಿ ಯಾವ ಕಾಲವಾಗಿತ್ತು. ಟೊಮೆಟೊ ಬೆಳೆಯಲು ಹೋಗಿ ಸಾಲ ಮೈಮೇಲೆ ಬಂತು. ಅಪ್ಪಅಮ್ಮ ಕೂಲಿಗೆ ಹೋಗುತ್ತಿದ್ದರು. ಆ ವರ್ಷವೂ ಮುಂಗಾರು ಕೈಕೊಟ್ಟು ಕೂಲಿಗೆ ಕರೆಯುವವರೂ ಇಲ್ಲದ ಪರಿಸ್ಥಿತಿಯಲ್ಲಿ ಒಂದುದಿನ ಪಕ್ಕದ ಮನೆಯಲ್ಲಿ ಕಡ ಕೇಳಿ ಇಲ್ಲ ಅನ್ನಿಸಿಕೊಂಡ ಅಮ್ಮ ಒಲೆ ಹಚ್ಚಲಿಲ್ಲ. ಆವೊತ್ತು ಕಣ್ಣಿಗೆ ರಾಚಿದ್ದು ಎದೆಗೆ ತಿವಿದಿತ್ತು. ಪಿಯುಸಿ ಮಾರ್ಕ್ಸ್‌ಕಾರ್ಡು ಹಿಡಿದುಕೊಂಡು ಬೆಂಗಳೂರಿಗೆ ಹೋಗಿಬಿಟ್ಟಿದ್ದ ನರಸಪ್ಪ. ಎಂಜಿ ರಸ್ತೆ ಪಕ್ಕದ ಬ್ರಾಂಚ್ ರಿಕ್ರೂಟ್‌ಮೆಂಟ್‌ಆಫೀಸಿನಲ್ಲಿ ಜನ ಗುಂಪುಗೂಡಿದ್ದು ಕಂಡಿತು. ಮಿಲಿಟರಿ ಸಮವಸ್ತ್ರದಲ್ಲಿದ್ದ ಡಾಕ್ಟರೆದುರು ಬಟ್ಟೆ ಕಳಚಿ ನಿಂತವನ ಎದೆ, ಕಣ್ಣು ಮುಂತಾಗಿ ಸಮಸ್ತ ಅಂಗಗಳ ತಪಾಸಣೆ ನಡೆಸಿ ಆಯ್ಕೆಯಾದ ವಿಷಯ ತಿಳಿಸಿದರು. ಗುಂಪಿಗೆ ಸಾಮೂಹಿಕ ರಹದಾರಿ ಕೊಟ್ಟು ಹೈದರಾಬಾದಿಗೆ ಹೊರಡಲು ಹೇಳಿದರು. ಗೋಲಕೊಂಡ ಕೋಟೆ ಹತ್ತಿರದ ತರಬೇತಿ ಕೇಂದ್ರಕ್ಕೆ ರಿಪೋರ್ಟು ಮಾಡಿಕೊಂಡ ಮೇಲೇ ಸರಿಯಾಗಿ ತಿಳಿದದ್ದು; ತಾನು ಆರ್ಮಿಯ ಆರ್ಟಿಲರಿ ವಿಭಾಗದಲ್ಲಿ ಸಿಪಾಯಿಯಾಗಿ ಸೇರಿದ್ದು ಅಂತ. ಮನೆಯ ಪರಿಸ್ಥಿತಿಯಿಂದಾಗಿ ಆಗಲೇ ಕಂಗಾಲಾದ ತಂದೆತಾಯಿ ತಾನು ಮನೆಬಿಟ್ಟು ಕಾಣೆಯಾದೆ ಅಂದರೆ ಪ್ರಾಣ ಕಳೆದುಕೊಳ್ಳುತ್ತಾರೆ ಅನ್ನುವ ಸತ್ಯ ಕಣ್ಣೆದುರು ರಾಚಿ, ತಾನು ಸೈನ್ಯದ ಕೆಲಸಕ್ಕೆ ಸೇರಿ ಸುರಕ್ಷಿತವಾಗಿದ್ದೇನೆ, ತಿಂಗಳು ತಿಂಗಳು ಹಣ ಕಳಿಸುತ್ತೇನೆ ಅಂತ ಕ್ಷಮೆಕೋರಿ ಪತ್ರಬರೆದು ಹಾಕಿದ್ದ. ಅವೊತ್ತೆ ಮಿಲಿಟರಿ ಕ್ಷೌರಿಕನ ಮಷೀನಿನಲ್ಲಿ ಎಲ್ಲರ ತಲೆಗಳು ಒಂದೇ ರೀತಿಯಾದುವು. ಸಾಲಾಗಿ ನಿಲ್ಲಿಸಿ ಕಂಬಳಿ, ಜಮಖಾನ, ಸೊಳ್ಳೆಪರದೆ, ಚಡ್ಡಿ, ಬನೀನು, ಬೂಟು ಮುಂತಾಗಿ ಬಾಚಣಿಗೆಯ ವರೆಗೆ ಒಂದುಹೊರೆ ಸಾಮಾನು ಕೊಡಲಾಯಿತು. ಸೂಜಿ ದಾರ ಗುಂಡಿಗಳಿರುವ ಚೀಲದ ಹೆಸರು 'ಹೌಸ್‌ವೈಫ್'. 'ನನಗಾಗಲೆ ಸರಕಾರ ಒಂದು ವೈಫ್ ಕೊಟ್ಟಿತ್ತು ಕಣೆ' ಅಂತ ಹೆಂಡತಿಯ ಹತ್ತಿರ ತಮಾಶೆ ಮಾಡೋದಿತ್ತು ಅವರು. ಬ್ಯಾರಕ್ಕಿನಲ್ಲಿ ಸಾಲಾಗಿ ಮಂಚಗಳು. ಇನ್ನೂ ಕತ್ತಲಿರುವಾಗಲೆ ಸೀಟಿಯಾಗುತ್ತಿತ್ತು. ತಯಾರಾಗಿ ಓಡಿ ಸಾಲುಗಟ್ಟಬೇಕು. ಎದೆಗೆ ಕಟ್ಟಿಕೊಳ್ಳುವ ನಂಬರೆ ಒಬ್ಬೊಬ್ಬರದೂ ಗುರುತು. ಆ ವಾರವನ್ನೆಲ್ಲಾ ಕಸ ಆರಿಸಿ ಸ್ವಚ್ಛಗೊಳಿಸಿದ ನಂತರ ಮೈದಾನದಲ್ಲಿ ಓಡುವ, ಜಿಗಿಯುವ ಕುಪ್ಪಳಿಸುವ ವ್ಯಾಯಾಮ. ಪೂರಿ, ಚಹಾದ ಬೆಳಗಿನ ತಿಂಡಿಯಾದ ಮೇಲೆ ಎರಡುಮೂರು ತಾಸು ಕವಾಯತು. ಊಟಕ್ಕೆ ರೊಟ್ಟಿ ಪಲ್ಯ, ಉದ್ದಿನಸಾರು, ಅನ್ನ. ಮಂಚದಕಡೆ ಸುಳಿಯುವಂತಿಲ್ಲ. 'ಕೋಯೀ ಜವಾನ್ ಸೋಯೇಗಾ ನಂಹೀ' ಓಸಿಯ ಆದೇಶ. ಮತ್ತೆ ಸ್ವಚ್ಛತಾಕೆಲಸ. ರೈಫಲ್ಲುಗಳ ನಳಿಗೆಗೆ ಕುದಿನೀರು ಹಾಕಿ, ಪುಲ್ ಥ್ರೂ ಎಳೆದು ಒಣಗಿಸುವುದು, ಕೋತ್‌ನಲ್ಲಿ ಇಡುವುದು, ಪಾಳಿಯಲ್ಲಿ ಬರುವ ಕಾವಲು ಡ್ಯೂಟಿ. ಆಗಾಗ ಹತ್ತು ಹನ್ನೆರಡು